# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 721 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಆರ್. ಧರ್ಮಸೇನ |
| ಉತ್ತರಿಸುವ ದಿನಾಂಕ | : | 17-09-2021 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅಂಬೇಡ್ಕರ್ ಭವನ, ಜಗಜೀವನರಾಂ ಭವನ ಮತ್ತು ವಾಲ್ಮೀಕಿ ಭವನಗಳು ನಿರ್ಮಾಣವಾಗದೆ ಬಾಕಿ ಉಳಿದಿದ್ದು, ಅವುಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು; | ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವತಿಯಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಮಂಜೂರಾತಿ ನೀಡಲಾದ ಡಾ॥ ಬಿ.ಆರ್ ಅಂಬೇಡ್ಕರ್ / ಡಾ॥ ಬಾಬು ಜಗಜೀವನರಾಂ /ಮಹರ್ಷಿ ವಾಲ್ಮೀಕಿ ಭವನಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.<br><br>ಕಾಮಗಾರಿ ಪ್ರಗತಿಯಲ್ಲಿರುವ ಭವನಗಳಿಗೆ ಸಂಬಂಧಿಸಿದಂತೆ ಭೌತಿಕ ಹಾಗೂ ಆರ್ಥಿಕ ಪ್ರಗತಿ ವರದಿಯನ್ನು ಆಧರಿಸಿ ಮಂಜೂರಾತಿ ಮೊತ್ತಕ್ಕೆ ಅನುಗುಣವಾಗಿ ಬಾಕಿ ಅನುದಾನವನ್ನು ಬಿಡುಗಡೆ ಮಾಡಿ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| ಆ) | ಅನುದಾನದ ಕೊರತೆಯಿಂದ ಅದರ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಕಾಮಗಾರಿಗಳನ್ನು ಪ್ರಾರಂಭಿಸುತ್ತೇವೆ ಎಂದು ಈ ಹಿಂದೆ ಸದನದಲ್ಲಿ ಭರವಸೆ ನೀಡಿದ್ದರೂ, ಇದುವರೆವಿಗೂ ಕಾಮಗಾರಿಗಳನ್ನು ಕೈಗೊಳ್ಳದಿರಲು ಕಾರಣಗಳೇನು; | ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಮೈಸೂರು ಜಿಲ್ಲೆ, ಕೆ.ಆರ್.ನಗರ ಟೌನ್‌ನಲ್ಲಿರುವ ಡಾ:ಬಾಬು ಜಗಜೀವನ ರಾಮ್ ಭವನದ ಕಟ್ಟಡ ನಿರ್ಮಾಣಕ್ಕೆ ರೂ.150.00ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಅದರಂತೆ, ಈಗಾಗಲೇ ಪೂರ್ಣ ಅನುದಾನವನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿರುತ್ತದೆ. ಕಾಮಗಾರಿ ಪ್ರಾರಂಭಿಸಬೇಕಿರುವ ಭವನಗಳಿಗೆ ಲಭ್ಯವಿರುವ ನಿವೇಶನಗಳಿಗೆ ಅನುಗುಣವಾಗಿ ಅಂದಾಜು ಪಟ್ಟಿಯನ್ನು ಪಡೆದು, ಕಾಮಗಾರಿಗಳನ್ನು ಶೀಘ್ರವಾಗಿ ಪ್ರಾರಂಭಿಸಲು ಹಾಗೂ ಗ್ರಾಮ ಆಯ್ಕೆ ಮಾಡಬೇಕಿರುವ ಮತ್ತು ನಿವೇಶನ ಸಮಸ್ಯೆ ಇರುವ ಪ್ರಕರಣಗಳಲ್ಲಿ ಸ್ಥಳೀಯ ಶಾಸಕರಿಂದ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪಡೆದು, ಸೂಕ್ತ ನಿವೇಶನವನ್ನು ಇಲಾಖೆಯ ವಶಕ್ಕೆ ಪಡೆದ ನಂತರ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು. |
| ಇ) | ವಿಶೇಷ ಅನುದಾನ ಮಂಜೂರು ಮಾಡಿ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಪ್ರಗತಿಯಲ್ಲಿರುವ ಭವನಗಳಿಗೆ ಭೌತಿಕ ಹಾಗೂ ಆರ್ಥಿಕ ಪ್ರಗತಿಗನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. |

ಸಕಇ 307 ಪಕವಿ 2021

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 721ಕ್ಕೆ ಅನುಬಂಧ

## ಭೌತಿಕ ಪ್ರಗತಿ

| ಜಿಲ್ಲೆ | ಭವನಗಳ ವಿವರ | ಮಂಜೂರಾದ ಭವನಗಳ ಸಂಖ್ಯೆ | ಪೂರ್ಣ | ಪ್ರಗತಿ | ಕಾಮಗಾರಿ ಪ್ರಾರಂಭಿಸ ಬೇಕಿರುವ | ನಿವೇಶನ ಸಮಸ್ಯೆ | ಗ್ರಾಮ ಆಯ್ಕೆ ಮಾಡಬೇಕಿರುವ |
|---|---|---|---|---|---|---|---|
| ಮೈಸೂರು | ಅಂಬೇಡ್ಕರ್ ಭವನ | 372 | 101 | 107 | 142 | 22 | – |
| | ಜಗಜೀವನರಾಂ ಭವನ | 97 | 36 | 31 | 21 | 9 | – |
| | ಮಹರ್ಷಿ ವಾಲ್ಮೀಕಿ ಭವನ | 260 | 122 | 122 | -- | 16 | -- |
| ಒಟ್ಟು | | 729 | 259 | 260 | 163 | 47 | 0 |
| ಚಾಮರಾಜನಗರ | ಅಂಬೇಡ್ಕರ್ ಭವನ | 111 | 47 | 42 | 4 | 4 | 14 |
| | ಜಗಜೀವನರಾಂ ಭವನ | 59 | 33 | 18 | 1 | – | 7 |
| | ಮಹರ್ಷಿ ವಾಲ್ಮೀಕಿ ಭವನ | 75 | 60 | 12 | -- | 3 | -- |
| ಒಟ್ಟು | | 245 | 140 | 72 | 5 | 7 | 21 |

## ಆರ್ಥಿಕ ಪ್ರಗತಿ

(ರೂ.ಲಕ್ಷಗಳಲ್ಲಿ)

| ಜಿಲ್ಲೆ | ಭವನಗಳ ವಿವರ | ಮಂಜೂರಾದ ಭವನಗಳ | ಮಂಜೂರಾತಿ ಮೊತ್ತ | ಬಿಡುಗಡೆ ಮೊತ್ತ | ಬಾಕಿ ಬಿಡುಗಡೆ |
|---|---|---|---|---|---|
| ಮೈಸೂರು | ಅಂಬೇಡ್ಕರ್ ಭವನ | 372 | 7646.00 | 4006.05 | 3639.95 |
| | ಜಗಜೀವನರಾಂ ಭವನ | 97 | 1858.00 | 1490.60 | 367.40 |
| ಒಟ್ಟು | | 469 | 9504.00 | 5496.65 | 4007.35 |
| ಚಾಮರಾಜನಗರ | ಅಂಬೇಡ್ಕರ್ ಭವನ | 111 | 2277.48 | 1917.98 | 359.50 |
| | ಜಗಜೀವನರಾಂ ಭವನ | 59 | 1373.70 | 1234.20 | 139.50 |
| ಒಟ್ಟು | | 170 | 3651.18 | 3152.18 | 499.00 |

*******